ದಿನಾಂಕ 10 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ಕಲಂ 65 ಬಿ ಭಾ. ಸಾ. ಅಧಿನಿಯಮದಡಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ನಿ ಪಿ 44 ಎಂದು, ಸಾಕ್ಷಿ ಸಹಿಯನ್ನು ನಿ ಪಿ 44 ಎ ಎಂದು ಗುರುತಿಸಲಾಯಿತು. ಹುಲಿಯ ಕಳೆಬರಹವನ್ನು ನಾಶಪಡಿಸುವಾಗ ತೆಗೆದ ಫೋಟೋಗಳನ್ನು ನಿ ಪಿ 45 ಮತ್ತು ನಿ ಪಿ 46 ಎಂದು, 11 ಪುಟಗಳ ಸಿ. ಡಿ. ಆರ್ ದಾಖಲಾತಿಯನ್ನು ನಿ ಪಿ 47 ಎಂದು ಗುರುತಿಸಲಾಯಿತು. Pendrive ಅನ್ನು ನಿ ಪಿ 48 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರವರಿಂದ ಃ-

ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿ ಅಲ್ಲ ಎಂದರೆ ಸರಿ. ನಿ ಪಿ 45 ಮತ್ತು ನಿ ಪಿ 46 ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ನಿ ಪಿ 45 ಮತ್ತು ನಿಪಿ 46 ಅನ್ನು ಸೃಷ್ಟಿಸಲು ಇಷ್ಟು ಸಮಯ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ ಪಿ 47 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ದಾಖಲಾತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)